**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಎಸ್.ಸಿ.87/2022</u>**

**ದಿನಾಂಕಃ 29.10.2024.**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 4 (ಚಾ.ಸಾ.14 )**

| | | |
|---|---|---|
| **ಹೆಸರು** | **ಃ** | **ಮಧು** |
| **ತಂದೆಯ ಹೆಸರು** | **ಃ** | **ಲೇಟ್ ಚೌಡಯ್ಯ** |
| **ವಯಸ್ಸು** | **ಃ** | **39 ವರ್ಷ** |
| **ಉದ್ಯೋಗ** | **ಃ** | **ಹೆಚ್.ಸಿ. 122, ಸಿಇಎನ್ ಪೊ.ಠಾ. ರಾಮನಗರ** |
| **ವಾಸ ಸ್ಥಳ** | **ಃ** | **ರಾಮನಗರ** |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

2021 ಏಪ್ರಿಲ್ ನಿಂದ ಜನವರಿ 2023ರವರೆಗೆ ನಾನು ಮಹಿಳಾ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ22.04.2022 ರಂದು ಮೊ.ಸಂ. 52/22 ರಲ್ಲಿ ಕಲಂ 498ಎ, 323, 324, 307, 504, 506 ಐಪಿಸಿ ಜೊತೆ 3 ಮತ್ತು 4 ಡಿಪಿ ಆಕ್ಟ್ ಪ್ರಕರಣದಲ್ಲಿ ಆರೋಪಿ ಚೆಲುವರಾಜು ಎಂಬುವವರನ್ನು ಪತ್ತೆ ಮಾಡಬೇಕೆಂದು ನನಗೆ ಮತ್ತು ಪಿಸಿ 636 ಗೋಣಪ್ಪ ಮಡ್ಡಿ ಎನ್ನುವವರನ್ನು ನೇಮಕ ಮಾಡಿದ್ದು, ಅದರಂತೆ ಆರೋಪಿಯ ಸ್ವಗ್ರಾಮ ಕರಿಕಲ್ಲು ಗ್ರಾಮಕ್ಕೆ ಹೋಗಿ ಬಾತ್ಮಿದಾರರ ಮುಖಾಂತರ ಆರೋಪಿಯು ಮನೆಯಲ್ಲಿರುವುದನ್ನು ಖಚಿತ ಪಡಿಸಿಕೊಂಡು ಸಂಜೆ 06.00 ಗಂಟೆಗೆ ಆರೋಪಿಯ ಮನೆಗೆ ಹೋಗಿ, ಆರೋಪಿಯನ್ನು ವಶಕ್ಕೆ ಪಡೆದು ಪಿ.ಐ. ರವರ ಮುಂದೆ ಠಾಣೆಗೆ ಬಂದು ಆರೋಪಿಯನ್ನು ಹಾಜರುಪಡಿಸಿದ್ದೇವೆ. ಈ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ಅವರು ಹಾಜರುಪಡಿಸಿದ ಆರೋಪಿ ಎಂದು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಹೆಚ್.ಜಿ., ವಕೀಲರಿಂದಃ**

**3.** ಆರೋಪಿಯನ್ನು ಕರೆದುಕೊಂಡು ಬರುವಂತೆ ನನಗೆ ಲಿಖಿತವಾಗಿ ಪತ್ರವನ್ನು ಕೊಟ್ಟಿರಲಿಲ್ಲ. ಪಿರ್ಯಾದುದಾರರಿಂದ ಮತ್ತು ಬಾತ್ಮಿದಾರರಿಂದ ಆರೋಪಿಯ ಊರಿನ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ಆರೋಪಿಯು ಕೆಲಸಕ್ಕೆ ಹೋಗಿದ್ದರಿಂದ ಆ ದಿವಸ ಅವರು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯನ್ನು ಹಿಡಿಯಲು ಹೋದಾಗ ಅವರು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ, ಕಾರಣ ಅವರು ಮನೆಯಲ್ಲಿಯೇ ಇದ್ದುದರಿಂದ.

**4.** ಆರೋಪಿಯನ್ನು ನಾವು ಅವನ ಮನೆಯಿಂದ ಕರೆದು ತಂದಿಲ್ಲ, ಆರೋಪಿಯನ್ನೇ ಠಾಣೆಗೆ ಕರೆಯಿಸಿ ದಸ್ತಗಿರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ಪಿ.ಐ.ರವರ ಮುಂದೆ ಸಂಜೆ 06.00 ಗಂಟೆಗೆ ಹಾಜರುಪಡಿಸಿದ್ದೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ, ಆದರೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**